# ರೋಗಗಳಿಗೆ ರಾಮಬಾಣ
# ಕೆಂಪು ನೆನೆಯಕ್ಕಿ ಗಿಡ



ಕಣ್ಣಿನ ದೃಷ್ಟಿಯನ್ನು ಉತ್ತಮಗೊಳಿಸುವ, ಸಂತಾನ ಹೀನತೆಯನ್ನು ಹೋಗಲಾಡಿಸಲು ಶ್ರಮಿಸುವ, ಆ್ಯಂಟಿ ಏಜಿಂಗ್ ಆಗಿ ಕೆಲಸ ಮಾಡುವ ಬಹೂಪಯೋಗಿ ಔಷಧೀಯ ಗುಣಗಳಿರುವ ಗಿಡ ಕೆಂಪು ನೆನೆಯಕ್ಕಿ.

ಇದು ಶರೀರದಲ್ಲಿ ಅನವಶ್ಯಕವಾಗಿ ಕಾಣಿಸಿಕೊಳ್ಳುವ ವಾರ್ಟ್ಸ್‌ಗಳನ್ನು ತೆಗೆದುಹಾಕುತ್ತದೆ. ಹಿತ್ತಿಲ ಬದಿಯಲ್ಲಿ ಹುಲುಸಾಗಿ ಬೆಳೆಯುವ ಈ ಸಸ್ಯಸಂಜೀವಿನಿ ಹುಲ್ಲು ತರವೇ ಕಾಣುತ್ತದೆ.

ಸಾಮಾನ್ಯವಾಗಿ ವರ್ಷದ ಎಲ್ಲಾ ಋತುಗಳಲ್ಲೂ ಎಲ್ಲೆಂದರಲ್ಲಿ ಬೆಳೆಯುವ ಈ ಗಿಡವನ್ನು ಕಳೆಗಿಡವೆಂದು ನಿರ್ಲಕ್ಷಿಸುವವರೇ ಹೆಚ್ಚು. ಆದರೆ ಈ ಗಿಡಕ್ಕೆ ಹಲವು ಕಾಯಿಲೆಗಳನ್ನು ಗುಣಪಡಿಸುವ ಶಕ್ತಿ ಇದೆ.

ಸಂಸ್ಕೃತದಲ್ಲಿ ನಾಗಾರ್ಜುನೀ ದುಗ್ಧಿಕಾ, ಹಿಂದಿಯಲ್ಲಿ ದುಗ್ಧಿ, ತೆಲುಗಿನಲ್ಲಿ ಪಾಲಕಾಡ ಗೊರ್ರೆಕಾಡ, ರೆಡ್ಡಿವಾರಿ ನಾನಬಾಲು ಹಾಗೂ ಇಂಗ್ಲಿಷ್‌ನಲ್ಲಿ ಯುಫೋರ್ಬಿಯಾ ಹಿರ್ಟಾ ಎಂಬ ಹೆಸರುಗಳಿಂದ ಕರೆಯಲ್ಪಡುವ ಈ ಗಿಡ ಸುಲಭವಾಗಿ ತನ್ನಿಂದ ತಾನಾಗೇ ಬೆಳೆಯುತ್ತದೆ.

ಈ ಗಿಡ ಬಿಳಿ ಮತ್ತು ಕೆಂಪು ಎಂಬ ಎರಡು ವಿಧಗಳಲ್ಲಿ ಕಂಡು ಬರುತ್ತದೆ. ಸಾಸಿವೆಯಷ್ಟು ಚಿಕ್ಕ ಹೂಗಳಿಂದ ಕೂಡಿದ ಗೊಂಚಲು ನೋಡಲು ಕೆಂಪಕ್ಕಿಯನ್ನು ಹೋಲುವ ಕಾರಣ 'ಕೆಂಪು ನೆನೆಯಕ್ಕಿ' ಎಂಬ ಹೆಸರು ಬಂದಿದೆ. ಗಿಡದ ಕಾಂಡವನ್ನು ಮುರಿದಾಗ ಬಿಳಿ ಹಾಲಿನಂತಹ ದ್ರವ ಬರುವುದರಿಂದ, ಕೆಲವು ಪ್ರದೇಶಗಳಲ್ಲಿ 'ಹಾಲು ಕುಡಿ' ಎಂದು ಕರೆಯುತ್ತಾರೆ. ಮಳೆಗಾಲದಲ್ಲಿ ಸುಮಾರು ಒಂದೂವರೆ ಅಡಿ ಎತ್ತರಕ್ಕೆ ಸೊಂಪಾಗಿ ಬೆಳೆದರೆ, ಬೇಸಿಗೆಯಲ್ಲಿ ಎತ್ತರ ಕಡಿಮೆಯಿರುತ್ತದೆ.

- ಕೆಂಪು ನೆನೆಯಕ್ಕಿ ರಸ, ಅಥವಾ ಕಷಾಯವನ್ನು ನಿಯಮಿತವಾಗಿ ಸೇವಿಸುತ್ತಾ ಬಂದಲ್ಲಿ ಚರ್ಮರೋಗ ಗುಣವಾಗುತ್ತದೆ, ನೇತ್ರ ದೃಷ್ಟಿ ವೃದ್ಧಿಸುತ್ತದೆ, ಹೊಟ್ಟೆಯಲ್ಲಿರುವ ಜಂತು ಹುಳುಗಳ ಬಾಧೆಯಿಂದ ಮುಕ್ತಿ ಸಿಗುತ್ತದೆ.
- ಗರ್ಭಾಶಯದ ದೋಷದಿಂದಾಗಿ ಋತುಚಕ್ರದ ಏರುಪೇರಾಗಿ ತೊಂದರೆಗೊಳಗಾದವರಿಗೆ ಈ ಗಿಡ ರಾಮಬಾಣದಂತೆ ಕೆಲಸ ಮಾಡುತ್ತದೆ.
- ಒಂದು ಮುಷ್ಟಿಯಷ್ಟು ಕೆಂಪು ನೆನೆಯಕ್ಕಿ ಎಲೆಗಳನ್ನು ಚೆನ್ನಾಗಿ ತೊಳೆದು, ಕುಟ್ಟಿ ಬಟ್ಟೆಯಲ್ಲಿ ಹಾಕಿ ರಸವನ್ನು ಹಿಂಡಿತೆಗೆದರೆ ರಸ ಬರುತ್ತದೆ. 34 ಚಮಚ ರಸಕ್ಕೆ ಕಾಲು ಚಮಚ ಕಾಳುಮೆಣಸಿನ ಪುಡಿಯನ್ನು ಬೆರೆಸಿ, ಋತುಚಕ್ರ ಪ್ರಾರಂಭವಾದ ಮೊದಲ ಮೂರು ದಿನಗಳು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದ ಗರ್ಭ ಸಂಬಂಧಿ ತೊಂದರೆಗಳು ದೂರವಾಗುತ್ತವೆ.
- ಶರೀರದಲ್ಲಿರುವ ರಕ್ತ ಕೆಡುವುದರಿಂದ ಮೈಮೇಲೆ ಗಡ್ಡೆಗಳು ಕಾಣಿಸಿಕೊಳ್ಳುತ್ತವೆ. ಅಂತಹ ಸಮಯದಲ್ಲಿ ಕೆಂಪು ನೆನೆಯಕ್ಕಿ ಗಿಡದ ಕಾಂಡವನ್ನು ಮುರಿದಾಗ ಬರುವ ಬಿಳಿ ಹಾಲಿನಂತಹ ದ್ರವವನ್ನು ಗಡ್ಡೆಗಳ ಮೇಲೆ ಕೆಲವು ದಿನಗಳ ಕಾಲ ಹಾಕುತ್ತಾ ಬಂದಲ್ಲಿ ಗಡ್ಡೆಗಳು ಕರಗುತ್ತವೆ.
- ಕತ್ತಿನ ಸುತ್ತಲೂ ಕಾಣಿಸಿಕೊಳ್ಳುವ 'ನರೋಲಿ' ಮಹಿಳೆಯರ ಅಂದವನ್ನು ಹಾಳು ಮಾಡುತ್ತದೆ. ಜನರ ನಡುವೆ ಓಡಾಡಲು ಹಿಂಜರಿಯುತ್ತಾರೆ. ಕಾಂಡದಿಂದ ಬರುವ ದ್ರವವನ್ನು ಒಂದು ತೊಟ್ಟು ನರೋಲಿ ಮೇಲೆ ಹಾಕಿದಲ್ಲಿ, ಕೆಲವೇ ದಿನಗಳಲ್ಲಿ ನರೋಲಿಗಳು ಉದುರಿಹೋಗುತ್ತವೆ. ಚರ್ಮದಮೇಲೆ ದ್ರವ ಬಿದ್ದಲ್ಲಿ ಚರ್ಮ ಸುಟ್ಟಂತಾಗುತ್ತದೆ. ಆದುದರಿಂದ ಆರೋಗ್ಯವಂತ ಚರ್ಮದ ಮೇಲೆ ದ್ರವ ಬೀಳದಂತೆ ಎಚ್ಚರ ವಹಿಸುವುದು.

■ ಜಿ. ನಾಗೇಂದ್ರ ಕಾವೂರು


ಸಂಧಿಲಿನ್
SANDHILIN सन्धिलिन

ಗಂಟು ನೋವು,
ಬೆನ್ನು ನೋವು,
ಮಾಂಸ ಖಂಡಗಳ ಸೆಳೆತ,
ನರ, ವಾತ ಸಂಬಂಧಿ

ನೋವಿಗೆ
ಶೀಘ್ರ
ಪರಿಣಾಮಕಾರಿ

CLINICALLY PROVED




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.